ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿನಾಂಕಃ **18.09.2021**

ಮುಖ್ಯ ವಿಚಾರಣೆಃ ಶ್ರೀ ಕೆ ಬಿ ಎಂ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವುದು ಸತ್ಯವಿರುತ್ತದೆ. ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

ಈ ಕೇಸಿನಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳಲ್ಲಿ ಕ್ರಯ ಪತ್ರದ ದೃಢಿಕೃತ ನಕಲನ್ನು ನೋಡಿದರೆ ಗುರುತ್ತಿಸುತ್ತೇನೆ ಅದನ್ನು ನಿಡಿ 37 ಎಂದು ಗುರುತಿಸಲಾಯಿತು . ಗ್ರಾಮ ಪಂಚಾಯತಿಯ ಕಾರ್ಯಲಯರವರು ಕೊಟ್ಟಿರುವ ಮನೆ ಕಟ್ಟುವ ಪರವಾನಿಗೆಯನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಡಿ 38 ಎಂದು ಗುರುತಿಸಲಾಯಿತು. ವಿದ್ಯುತ್ ಬಿಲ್ಲನ್ನು ನಿಡಿ 39 ಎಂದು ಗುರುತಿಸಲಾಯಿತು . ಕಂದಾಯ ರಶೀತಿಯನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಡಿ 40 ಎಂದು ಗುರುತಿಸಲಾಯಿತು. ಪರಿವರ್ತನ ಆದೇಶವನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಡಿ 41 ಎಂದು ಗುರುತಿಸಲಾಯಿತು .

ಪಾಟಿ ಸವಾಲುಃ ವಾದಿ ಪರ ವಕೀಲರು ಗೈರು ಹಾಜರಿರುತ್ತಾರೆ.

ಪಾಟಿ ಸವಾಲು ಪ್ರತಿವಾದಿ 3 ರಿಂದ 5 ರವರ ಪರವಾಗಿ ಶ್ರೀ ಕೆ ಸಿ ಎಸ್ ವಕೀಲರಿಂದ ಇಲ್ಲ ಎಂದು ಹೇಳಿರುತ್ತಾರೆ .

ಪಾಟಿ ಸವಾಲು ಪ್ರತಿವಾದಿ 1 ರವರ ಪರವಾಗಿ ವಕೀಲರು ಗೈರು ಹಾಜರಾಗಿರುತ್ತಾರೆ.

ವಾದಿ ಮತ್ತು ಪ್ರತಿವಾದಿ 1 ರವರ ವಕೀಲರ ಪಾಟಿ ಸವಾಲಿಗೆ ಕಾಲವಕಾಶ ನೀಡಲಾಗಿದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.